ಓ ಎಸ್ ನಂಬರ್‌ಃ 376/2015

ಡಿಡಬ್ಲ್ಯು-2

**ದಿನಾಂಕ 14-07-2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲುಃ ವಾದಿಯ ಪರವಾಗಿ ಶ್ರೀ. ಎಸ್ ಎಸ್ ಕೆ ವಕೀಲರಿಂದ**

1. ನಾನು 2 ವೀಲರ್ ಗ್ಯಾರೇಜ್ ನಲ್ಲಿ ಬಾಡಿಗೆ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಆ ಗ್ಯಾರೇಜ್ ನ ಹೆಸರು ಇಸ್ಮಾಯಿಲ್ ಆಟೋ ಗ್ಯಾರೇಜ್ ಎಂದು ಇರುತ್ತದೆ. ಅದನ್ನು ನಾನು ಬಾಡಿಗೆಯಲ್ಲಿ ನಡೆಸುತ್ತಿದ್ದೇನೆ. ನಾನು ಕಳೆದ 20 ವರ್ಷದಿಂದ ಬಾಡಿಗೆ ಮೇಲೆ ನಡೆಸುತ್ತಿದ್ದೇನೆ. ಆ ಗ್ಯಾರೇಜ್ ನ್ನು ನಾನೇ ನಡೆಸುತ್ತೇನೆ. ಆ ಗ್ಯಾರೇಜ್ ನಲ್ಲಿ ಕೆಲಸವನ್ನು ನಾನು ಒಬ್ಬನೇ ಮಾಡುತ್ತೇನೆ. ಆ ಗ್ಯಾರೇಜ್ ನ್ನು ನಡೆಸುವ ಪೂರ್ವದಲ್ಲಿ ಮೊದಲು ಎನ್ ಟಿ ಟಿ ಎಫ ನಲ್ಲಿ ಕೆಲಸ ಮಾಡಿದ್ದೆನು. ಅಂದಾಜು ನಾನು ಎನ್ ಟಿ ಟಿ ಎಫ್ ನಲ್ಲಿ ಮೂವತ್ತು ವರ್ಷಗಳ ಹಿಂದೆ ಕೆಲಸ ಮಾಡಿದ್ದೆನು. ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಗ್ಯಾರೇಜ್ ನಿಖರವಾಗಿ ಲಕ್ಷ್ಮೀ ಟಾಕೀಸ್ ಹತ್ತಿರ ಇರುತ್ತದೆ. ನನ್ನ ಗ್ಯಾರೇಜ್ ನಿಂದ ದಾವಾ ಆಸ್ತಿಯು ಅಂದಾಜು 20 ಮೀಟರ್ ದೂರದಲ್ಲಿ ಇದೆ. ದಾವಾ ಆಸ್ತಿಯ ಬಲಕ್ಕೆ ಸಂಗಮ್ ಟಾಕೀಸ್ ಇದೆ ಎಂದರೆ ಸರಿ. ದಾವಾ ಆಸ್ತಿಯ ಎಡಗಡೆ ಒಂದು ಕಾಂಪ್ಲೆಕ್ಸ ಇದೆ ಎಂದರೆ ಸರಿ. ಆ ಆಸ್ತಿಯ ಮುಂದಕ್ಕೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. ನಾನು ನನ್ನ ಗ್ಯಾರೇಜ್ ಇದೆ ಮತ್ತು ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ಎಲ್ಲ ವಿಷಯಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತಮುತ್ತಲೂ ನಾನು ಹೇಳುವಂತಹ ಯಾವುದೇ ಗ್ಯಾರೇಜ್ ಇರುವುದಿಲ್ಲ ಎಂದರೆ ಸರಿಯಲ್ಲ.

2. ಶಮಶುದ್ದೀನ್ ರಾಹುತ್ ಎನ್ನುವವರು ಕಳೆದ 20 ವರ್ಷಗಳಿಂದ ಪರಿಚಯವಿರುತ್ತಾರೆ. ಆ ಶಮಶುದ್ದೀನ್ ರವರು ಫ್ಯಾಕ್ಟರಿಯಲ್ಲಿ ಮಾತ್ರ ನನಗೆ ಪರಿಚಯ ಇರುತ್ತಾರೆ. ಅವರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಯಾವ ಕಂಪನಿಯ ಎರಡು ಲೇತ್ ಮಶೀನ್ ಗಳು ಇರುತ್ತವೆ ಎಂದು ಅದರ ಹೆಸರು ನನಗೆ ಹೇಳಲು ಬರುವುದಿಲ್ಲ. ಆ ಲೇತ್ ಮಶೀನ್ ಗಳನ್ನು ಯಾವಾಗ ಮತ್ತು ಎಷ್ಟನೇ ಇಸವಿಯಲ್ಲಿ ತರಿಸಿದ್ದರು ಎಂದು ನನಗೆ

ಗೊತ್ತಿಲ್ಲ. ಆ ಲೇತ್ ಮಶೀನ್ ಗಳಿಂದ ಏನು ಉಪಯೋಗ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾರ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಮೂಲತಃ ತೆಂಗಿನಕಾಯಿಯವರ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಯ ಹೆಸರನ್ನು ಕೇಳಿರುವುದಿಲ್ಲ. ದಾವಾ ಆಸ್ತಿಯನ್ನು ಅವರೇ ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐದನೇ ಪ್ರತಿವಾದಿಯವರು ಬಾಡಿಗೆ ಇರುತ್ತಾರೆ ಅಥವಾ ಸ್ವಂತ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಐದನೇ ಪ್ರತಿವಾದಿ ಪರಿಚಯನೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಐದನೇ ಪ್ರತಿವಾದಿಯ ಮಾತು ಕೇಳಿಕೊಂಡು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ಈ ದಾವೆ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು ಐದನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

ಪ್ರಧಾನ **ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**